Rotary
ರೋಟರಿ ಐಸಿರಿ ಪರ್ಕಳ
ವಲಯ-4, ರೋ. ಜಿಲ್ಲೆ-3182
ನಮ್ಮ ನಡೆ... ಕೃಷಿಯ ಕಡೆ...
UNITE FOR GOOD

ರೊ. ರಾಜೇಶ್ ಡಿ. ಶೆಣೈ ಸಂಪಾದಕತ್ವದ
# ಐಶ್ವರ್ಯ
ಸಂಪುಟ: 4 ಸಾಪ್ತಾಹಿಕ ಸಂಚಿಕೆ : 38
ದಿನಾಂಕ: 24.03.2026


Rtn. Francesco Arezzo
R.I. President


Rtn. K. Palaksha
District Governor


Rtn. Anil Kumar
President


Rtn. Krishnappa
Secretary

## ಪಂಚತಾರಾ ಹಸಿರುಮನೆ ರಚಿಸಿ – ಡಾ. ನಾರಾಯಣ ಶೆಣೈ



ಜಲ ಸಂರಕ್ಷಣೆ – ಜಲ ಸಂವರ್ಧನೆಗೆ ನೀರಿನ ಮಿತ ಬಳಕೆ, ಬಳಸಿದ ನೀರಿನ ಮರು ಬಳಕೆ, ತೆರೆದ ಬಾವಿ, ಕೊಳವೆ ಬಾವಿ ಮುಂತಾದ ಜಲಮೂಲಗಳಿಗೆ ಜಲ ಮರುಪೂರಣ ಮಾಡುವುದು, ಪ್ಲಾಸ್ಟಿಕ್ ಬಳಕೆಯನ್ನು ಸಾಧ್ಯವಾದಷ್ಟು ಕಡಿಮೆ ಮಾಡಿ, ಬಳಸಿದ ಪ್ಲಾಸ್ಟಿಕ್ ಮತ್ತು ನಿರುಪಯೋಗಿ ಕಾಗದವನ್ನು ಮರು ಸಂಸ್ಕರಣೆ ಗೊಳಪಡಿಸಲು ಕಸ ವಿಲೇವಾರಿ ಮಾಡುವವರಿಗೆ ನೀಡುವುದು, ಹಸಿ ಕಸದಿಂದ ಕಾಂಪೋಸ್ಟ್ ಗೊಬ್ಬರ ಮಾಡಿ ಮನೆಯ ಕೈತೋಟಕ್ಕೆ ಬಳಸುವುದು, ವಿಷಮುಕ್ತ ಆಹಾರಕ್ಕಾಗಿ ಕೈತೋಟ, ತಾರಸಿ ತೋಟ ಮಾಡಿ ಸಾವಯವ ಸೊಪ್ಪು, ತರಕಾರಿ, ಹೂವು, ಹಣ್ಣುಗಳನ್ನು ಬೆಳೆಸುವುದು, ಮನೆಗೆ ವಿದ್ಯುತ್ ಮತ್ತು ಬಿಸಿನೀರಿಗೆ ಸೌರಶಕ್ತಿಯನ್ನು ಬಳಸುವುದು, ಎಲ್.ಇ.ಡಿ. ಬಲ್ಬ್ ಬಳಸಿ, ಬೇಕಾದಾಗ ಲೈಟ್ ಮತ್ತು ಫ್ಯಾನ್ ಬಳಸಿ ಮಿತವ್ಯಯ ಸಾಧಿಸುವುದು, ಪ್ರಾಣಿ–ಪಕ್ಷಿಗಳಿಗೆ ನೀರು, ಕಾಳು, ಮೇವು, ಆಹಾರ, ಗೂಡು ಒದಗಿಸುವುದೇ ಮೊದಲಾದ ಚಟುವಟಿಕೆ ಗಳಿಂದ ನಮ್ಮ ಮನೆಯನ್ನೂ ಪಂಚತಾರಾ ಹಸಿರು ಮನೆಯನ್ನಾಗಿ ಪರಿವರ್ತಿಸಿ ನೆಲ – ಜಲ ಮತ್ತು ಪರಿಸರದ ಸಂರಕ್ಷಣೆ ಮಾಡಲು ಮಣಿಪಾಲ ಎಮ್.ಐ.ಟಿಯ ಭೂವಿಜ್ಞಾನ ಪ್ರಾಧ್ಯಾಪಕರಾಗಿ ಸೇವೆಸಲ್ಲಿಸಿದ ಡಾ. ನಾರಾಯಣ ಶೆಣೈ ಕರೆ ನೀಡಿದರು. ಅವರು ಮಾರ್ಚ್ 17ರಂದು ಮಣಿಪಾಲದ ರೋಟರಿ ಸಭಾಭವನದಲ್ಲಿ ನಡೆದ ರೋಟರಿ ಐಸಿರಿ ಪರ್ಕಳ, ರೋಟರಿ ಕ್ಲಬ್ ಮಣಿಪಾಲ ಮತ್ತು ರೋಟರಿ ಕ್ಲಬ್ ಕಟಪಾಡಿಯ ಜಂಟಿ ಸಭೆಯ ಮುಖ್ಯ ಅತಿಥಿಯಾಗಿ ಮಾತನಾಡುತ್ತಿದ್ದರು.





## ಮಾರ್ಚ್ 22 ವಿಶ್ವ ಜಲ ದಿನ

ವಿಶೇಷ ಲೇಖನ
ರೊ. ಅಶೋಕ್ ನಾಯಕ್
ಕ್ರೀಡಾ ಸಂಯೋಜಕರು,
ರೋಟರಿ ಐಸಿರಿ ಪರ್ಕಳ

ವಿಶ್ವ ಜಲ ದಿನವನ್ನು ಪ್ರತಿವರ್ಷ ಮಾರ್ಚ್ 22ರಂದು ಆಚರಿಸಲಾಗುತ್ತದೆ. ಇದನ್ನು ಸಂಯುಕ್ತ ರಾಷ್ಟ್ರಗಳು 1993ರಲ್ಲಿ ಪ್ರಾರಂಭಿಸಿದವು.

### ವಿಶ್ವ ಜಲ ದಿನದ ಮಹತ್ವ.

ನೀರು ಜೀವನದ ಮೂಲವಾಗಿದೆ. ಆದರೆ ವಿಶ್ವದ ಹಲವಾರು ಜನರಿಗೆ ಇನ್ನೂ ಶುದ್ಧ ನೀರು ಲಭ್ಯವಿಲ್ಲ. ಭೂಮಿಯ ಮೇಲೆ ಲಭ್ಯವಿರುವ ನೀರಿನಲ್ಲಿ 97% ಉಪ್ಪು ನೀರು ಇದು ಕುಡಿಯಲು ಯೋಗ್ಯವಲ್ಲ ಉಳಿದ 3% ನೀರು ಮಾತ್ರ ಕುಡಿಯಲು ಯೋಗ್ಯ ವಾಗಿರುತ್ತದೆ.

ಇದರಲ್ಲಿಯೂ ಸುಮಾರು 2% ಹಿಮನದಿಗಳು. ಇನ್ನು ಉಳಿದ 1% ಕ್ಕಿಂತ ಕಡಿಮೆ ಪ್ರಮಾಣದ ನೀರು ಮಾತ್ರ ನಮಗೆ ಲಭ್ಯವಿರುವ ನದಿಗಳು ಕೆರೆಗಳು ಭೂಗರ್ಭ ಜಲ.

ಇದರರ್ಥ, ಭೂಮಿಯ ಒಟ್ಟು ನೀರಿನಲ್ಲಿ ನಾವು ಕುಡಿಯಲು ಮತ್ತು ಇನ್ನಿತರ ಅವಶ್ಯಕತೆಗಳಿಗಾಗಿ ಬಳಸಲು ಲಭ್ಯವಿರುವ ನೀರು ಕೇವಲ 1% ಕ್ಕಿಂತ ಕಡಿಮೆ. ಆರೋಗ್ಯ ಮತ್ತು ಸ್ವಚ್ಛತೆ ಕಾಪಾಡಲು ಶುದ್ಧ ನೀರಿನ ಅಗತ್ಯ "ಪ್ರತಿ ಹನಿ ನೀರು ಅಮೂಲ್ಯ".

ನೀರಿನ ಬೆಲೆ: ನಮಗೆ ಪ್ರಾಕೃತಿಕವಾಗಿ ದೊರೆಯುವ ನೀರನ್ನು ಉತ್ಪಾದಿಸುವುದು ಸರಳವಲ್ಲ. ರಾಸಾಯಾನಿಕವಾಗಿ ಜಲಜನಕ

*(ಮುಂದಿನ ಪುಟಕ್ಕೆ)*

**ವಿಶ್ವ ಜಲ ದಿನ**

ವಿಶೇಷ ಲೇಖನ
ರೊ. ಅಶೋಕ್ ನಾಯಕ್
*(ಮುಖಪುಟದಿಂದ)*

ಮತ್ತು ಆಮ್ಲಜನಕವನ್ನು ಸೇರಿಸಿದರೆ ನೀರು ಉತ್ಪತ್ತಿಯಾಗುತ್ತದೆ.

ಆದರೆ ಇದು ಕೈಗಾರಿಕಾ ಮಟ್ಟದಲ್ಲಿ ಇದು ಸಾಮಾನ್ಯ ವಿಧಾನ ಅಲ್ಲ. 1 ಲೀಟರ್ ನೀರನ್ನು ತಯಾರಿಸುವಲ್ಲಿ ಸುಮಾರು ₹1000 ದುಬಾರಿ ವೆಚ್ಚವಾಗಬಹುದು. ಅಂದರೆ ನಮಗೆ ನಿರಾಯಾಸವಾಗಿ ದೊರೆಯುವ ನೀರಿನ ಉತ್ಪಾದನ ವೆಚ್ಚ ಊಹಿಸಲಸಾಧ್ಯ.

### ಭೂಮಿಯಲ್ಲಿನ ನೀರಿನ ಮೂಲ:

ಒಂದು ಸಿದ್ಧಾಂತದ ಪ್ರಕಾರ ಜ್ವಾಲಾಮುಖಿಗಳು ಸ್ಫೋಟಿಸುವ ಸಮಯದಲ್ಲಿ ಭೂಮಿಯ ಒಳಭಾಗದಿಂದ ಅನಿಲಗಳು ಹೊರಬಂದು ಜಲಜನಕ ಮತ್ತು ಆಮ್ಲಜನಕ ಸೇರಿ ನೀರಾಗಿ ಪರಿವರ್ತನೆಯಾಗಿ ನಂತರ ಮಳೆಯಾಗಿ ಸಮುದ್ರಗಳಾಗಿ ರೂಪುಗೊಂಡವು. ಮತ್ತೊಂದು ಸಿದ್ಧಾಂತದ ಪ್ರಕಾರ, ನೀರಿನ ಆಶ್ರಯವಿರುವ ಬಾಲಗ್ರಹಗಳು ಅಥವಾ ಧೂಮಕೇತುಗಳು ಭೂಮಿಗೆ ಅಪ್ಪಳಿಸಿ ಭುಮಿಯಲ್ಲಿ ನೀರಿನ ಆಗಮನವಾಯಿತು.

### ಜಗತ್ತಿನಲ್ಲಿ ಮತ್ತು ಭಾರತದಲ್ಲಿ ನೀರಿನ ಕೊರತೆ ಯಾವಾಗ?

ಜಾಗತಿಕ ಮಟ್ಟದಲ್ಲಿ 2050ರೊಳಗೆ ಸುಮಾರು 5.25 ಬಿಲಿಯನ್ ಜನರು ನೀರಿನ ಕೊರತೆಯನ್ನು ಅನುಭವಿಸುವ ಸಾಧ್ಯತೆ ಇದೆ. ಭಾರತದಲ್ಲಿ ನೀತಿ ಆಯೋಗದ ವರದಿ ಪ್ರಕಾರ 2030ರೊಳಗೆ ಭಾರತದ ನೀರಿನ ಬೇಡಿಕೆ ದ್ವಿಗುಣವಾಗಬಹುದು ಸುಮಾರು 40% ಜನರಿಗೆ ಕುಡಿಯುವ ನೀರಿನ ಕೊರತೆ ಉಂಟಾಗಬಹುದು.

### ವಿಶ್ವ ಜಲ ದಿನವನ್ನು ನಾವು ಪರಿಣಾಮಕಾರಿಯಾಗಿ ಹೇಗೆ ಆಚರಿಸ ಬಹುದು?

1. ಟ್ಯಾಪ್ ಲೀಕ್ ಆಗಿದ್ದರೆ ಸರಿಪಡಿಸುವುದು, ಮುಖ ತೊಳೆಯುವಾಗ ಹಲ್ಲು ಉಜ್ಜುವಾಗ ನೀರನ್ನು ವ್ಯರ್ಥ ಮಾಡದೇ ಇರುವುದು.
2. ಸ್ನಾನ ಮಾಡುವಾಗ ಶವರ್ ಬದಲು ಬಕೆಟ್ ಬಳಸುವುದು.
3. ಮನೆಮಂದಿ ಮತ್ತು ಸ್ನೇಹಿತರಿಗೆ ತಿಳಿಸಿ ನೀರು ಉಳಿಸುವ ಬಗ್ಗೆ ಮಾಹಿತಿ ಹಂಚಿಕೊಂಡು ಜಾಗೃತಿ ಮೂಡಿಸುವುದು.
4. ಕೆರೆ, ನದಿಗಳ ಸ್ವಚ್ಛತೆ ಕಾಪಾಡುವುದು ಮತ್ತು ನೀರಿನ ಮೂಲಗಳನ್ನು ರಕ್ಷಿಸುವುದು.
5. ಕೃಷಿಯಲ್ಲಿ ಹನಿ ನೀರಾವರಿ ವಿಧಾನ ಬಳಸಿ ನೀರಿನ ಉಳಿತಾಯ ಮಾಡುವುದು.
6. ಮರ ಗಿಡಗಳನ್ನು ನೆಡುವುದು. ಮರಗಳು ನೀರಿನ ಚಕ್ರವನ್ನು ಸಮತೋಲನದಲ್ಲಿರಿಸುತ್ತವೆ

*"ನೀರಿಲ್ಲದೆ ಜೀವನ ಇಲ್ಲ. ಇಂದು ನೀರನ್ನು ಉಳಿಸಿದರೆ, ನಾಳೆ ಜೀವನ ಉಳಿಯುತ್ತದೆ."*

---

## Pre PELS & Pre SELS:
## ಪ್ರಶಿಕ್ಷಣ್ 2026

**ಪೂರ್ಣಾವಧಿ ಭಾಗವಹಿಸಿದ ನಮ್ಮ ನಿಯೋಜಿತ ಅಧ್ಯಕ್ಷರು ಮತ್ತು ಕಾರ್ಯದರ್ಶಿ**




ಮಾರ್ಚ್ 22, ಭಾನುವಾರದಂದು ಅಮೃತ ಗಾರ್ಡನ್ ನಲ್ಲಿ ನಡೆದ **ಪ್ರಶಿಕ್ಷಣ್ 2026** – ಪ್ರಿ ಪೆಲ್ಸ್ ಮತ್ತು ಪ್ರಿ ಸೆಲ್ಸ್ ಕಾರ್ಯಾಗಾರದಲ್ಲಿ ನಮ್ಮ ನಿಯೋಜಿತ ಅಧ್ಯಕ್ಷರಾದ ರೊ. ಸಂದೀಪ್ ಕುಮಾರ್ ಮತ್ತು ನಿಯೋಜಿತ ಕಾರ್ಯದರ್ಶಿ ರೊ. ರಾಜೇಶ್ ಡಿ. ಶೆಣೈ ಸಕ್ರಿಯವಾಗಿ ಭಾಗವಹಿಸಿದರು.

ನಿಯೋಜಿತ ಸಹಾಯಕ ಗವರ್ನರ್ ರೊ. ಹೇಮಂತ್ ಯು. ಕಾಂತ್ ಆಯೋಜಿಸಿ, ರೋಟರಿ ಕ್ಲಬ್ ಮಣಿಪಾಲ ಟೌನ್ ಆತಿಥ್ಯ ವಹಿಸಿದ ಈ ಕಾರ್ಯಾಗಾರವನ್ನು ಮಾಜಿ ರೋಟರಿ ಜಿಲ್ಲಾ ರಾಜ್ಯಪಾಲ ರೊ. ಬಿ. ರಾಜಾರಾಮ್ ಭಟ್ ಉದ್ಘಾಟಿಸಿದರು. ಡಿಸ್ಟ್ರಿಕ್ಟ್ ಲರ್ನಿಂಗ್ ಫೆಸಿಲಿಟೇಟರ್ ರೊ. ದೇವ್ ಆನಂದ್ ಮುಖ್ಯ ಅತಿಥಿಯಾಗಿದ್ದರು. ಸಹಾಯಕ ಗವರ್ನರ್ ರೊ. ಅಮಿತ್ ಅರವಿಂದ್ ಗೌರವ ಅತಿಥಿಯಾಗಿದ್ದರು.

ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದ ರೊ. ಕೆ. ಎಸ್. ಸುಬ್ರಮಣ್ಯ ಬಾಸ್ರಿ ಅಧ್ಯಕ್ಷರುಗಳ ಪಾತ್ರ ಮತ್ತು ಜವಾಬ್ದಾರಿಗಳ ಬಗ್ಗೆ, ರೊ. ಡಾ.ಕೆ. ಸುರೇಶ್ ಶೆಣೈ ಕಾರ್ಯದರ್ಶಿಗಳ ಪಾತ್ರ ಮತ್ತು ಜವಾಬ್ದಾರಿಗಳ ಕುರಿತು, ರೊ. ಡಾ. ಎ. ಗಣೇಶ್ ಕ್ಲಬ್ ಮೀಟಿಂಗ್ಸ್, ಬೋರ್ಡ್ ಮೀಟಿಂಗ್ಸ್ ಮತ್ತು ಕ್ಲಬ್ ಅಸ್ಸೆಂಬ್ಲಿ ಬಗ್ಗೆ, ರೊ. ಡಾ. ಸೇಸಪ್ಪ ರೈ ಆರ್ಥಿಕ ಬಾಧ್ಯತೆ, ಆಯವ್ಯಯ ಮತ್ತು ಲೆಕ್ಕಪರಿಶೋಧನೆ ಕುರಿತು ಮತ್ತು ರೊ. ರಾಮಚಂದ್ರ ಉಪಾಧ್ಯಾಯ TRF Contribution, Global Grants ಮತ್ತು DDF ಬಗ್ಗೆ ಮಾಹಿತಿ ನೀಡಿದರು.

ರೊ. ಡಾ. ದೀಪಕ್ ರಾಮ್ ಬಾಯಿರಿ ಅಧ್ಯಕ್ಷತೆ ವಹಿಸಿದ್ದ ಈ ಕಾರ್ಯಕ್ರಮವನ್ನು ನಿಯೋಜಿತ ವಲಯ ಸೇನಾನಿ ರೊ. ನಿತ್ಯಾನಂದ ನಾಯಕ್ ನಿರೂಪಿಸಿದರು.

## ಪರಿಚಯ್ – 2026

ಬಳಿಕ ನಡೆದ ಪರಿಚಯ್ 2026 ಕಾರ್ಯಕ್ರಮದಲ್ಲಿ ವಲಯ ಸೇನಾನಿ ರೊ. ಸ್ಮಿತಾ ಕಾಮತ್, ರೊ. ಗುರುಪ್ರಸಾದ್ ಕಾಮತ್, ರೊ. ಮಂಜುನಾಥ ಉಪಾಧ್ಯ ಎಮ್., ರೊ. ಗೀತಾಶ್ರೀ ಎಮ್. ಉಪಾಧ್ಯ ಮತ್ತು ರೊ. ಡಾ. ಪ್ರಭಾಕರ ಯು. ರೆಂಜಾಳ ಜತೆ ಸೇರಿದರು.

---



ತಾನು ವಲಯ ಸೇನಾನಿಯಾಗಿ ಜವಾಬ್ದಾರಿ ನಿರ್ವಹಿಸುತ್ತಿರುವ ಮೂರೂ ರೋಟರಿ ಕ್ಲಬ್ ಗಳ ಜಂಟಿ ಸಭೆಯನ್ನು 'ನ ಭೂತೋ' ಅನ್ನುವ ರೀತಿಯಲ್ಲಿ ಯಶಸ್ವಿಯಾಗಿ ಆಯೋಜಿಸಿದ ರೊ. ಸ್ಮಿತಾ ಜಿ. ಕಾಮತ್ ಅವರಿಗೆ ಅಭಿನಂದನೆಗಳು. 🌷🌷

## ಬೌದ್ಧಿಕ ಸಿರಿ *ಯೋಗ್ಯತೆ ಒಂದೇ ಉಳಿವುದು ಕೊನೆಗೆ!*

"ಬೊಂಬೆ ಹೇಳುತ್ತೈತೆ... ಮತ್ತೆ ಹೇಳುತ್ತೈತೆ... ನೀನೆ ರಾಜಕುಮಾರ..."

ಈ ಸಾಲುಗಳು ಕೇವಲ ಹಾಡಿನ ಪದಗಳಲ್ಲ; ಪ್ರತಿಯೊಬ್ಬರಲ್ಲಿ ಅಡಗಿರುವ ಸಾಮರ್ಥ್ಯವನ್ನು ಜಾಗೃತಗೊಳಿಸುವ ಪ್ರೇರಣೆ. ಜೀವನವೆಂಬ ವೇದಿಕೆಯಲ್ಲಿ ನಾವು ಎಲ್ಲರೂ ಪಾತ್ರಧಾರಿಗಳು.

ಗುಡಿಸಲೇ ಆಗಲಿ ಅರಮನೆಯಾಗಲಿ ಆಟವೇ ನಿಲ್ಲದು, ಎಂದೂ ಆಟ ನಿಲ್ಲದು.. ಜೀವನದ ಹಾದಿಯಲ್ಲಿ ಕೆಲವೊಮ್ಮೆ ಜಯ, ಕೆಲವೊಮ್ಮೆ ಸೋಲು ಬರುತ್ತವೆ. ಆದರೆ "ಎಂದೂ ಸೋಲದು... ಸೋತು ತಲೆಯ ಬಾಗದು..." ಎಂಬ ಸಂದೇಶ ನಮ್ಮಲ್ಲಿ ಆತ್ಮವಿಶ್ವಾಸವನ್ನು ತುಂಬುತ್ತದೆ. ಇದೇ ಯೋಗ್ಯತೆ- ನಮ್ಮೊಳಗಿನ ಶಕ್ತಿ, ಪರಿಶ್ರಮ ಮತ್ತು ಧೈರ್ಯ.

ಆದರೆ, ಜೀವನದಲ್ಲಿ ಎಲ್ಲವೂ ನಮ್ಮ ಕೈಯಲ್ಲೇ ಇರುವುದಿಲ್ಲ. "ಯೋಗವು ಒಮ್ಮೆ ಬರುವುದು ನಮಗೆ...ಯೋಗ್ಯತೆ ಒಂದೇ ಉಳಿವುದು ಕೊನೆಗೆ" ಎಂಬ ತತ್ವ ಜೀವನದ ಸತ್ಯವನ್ನು ಹೇಳುತ್ತದೆ. ಯೋಗ ಎಂದರೆ ಸಮಯದ ಅನುಕೂಲ, ದೈವಾನುಗ್ರಹ. ಅದು ಯಾವಾಗ ಬರುತ್ತದೆ ಎಂಬುದು ನಮ್ಮ ಕೈಯಲ್ಲಿಲ್ಲ. ಆದರೆ, ಬಂದಾಗ ಅದನ್ನು ಸ್ವೀಕರಿಸಲು ನಾವು ಸಿದ್ಧರಾಗಿರಬೇಕು - that readiness is ಯೋಗ್ಯತೆ.

ಹಾಡಿನಲ್ಲಿ ಹೇಳುವಂತೆ, "ತಾನೇ ಉರಿದು ಮನೆಗೆ ಬೆಳಕು ಕೊಡುವ ದೀಪವಿದು..." ನಮ್ಮ ಜೀವನವೂ ಹಾಗೆಯೇ -ನಾವು ನಮ್ಮನ್ನು ತಯಾರಿಸಿಕೊಂಡಾಗ, ನಮ್ಮ ಪರಿಶ್ರಮದ ಬೆಳಕು ಇತರರ ಜೀವನವನ್ನೂ ಪ್ರಕಾಶಮಾನಗೊಳಿಸುತ್ತದೆ.

ಪ್ರೀತಿ ಹಂಚುವ ಹೃದಯ, ವಿನಯದಿಂದ ನಡೆಯುವ ಸ್ವಭಾವ, ಸೋಲಿನಲ್ಲೂ ತಲೆಬಾಗದ ಮನೋಬಲ - ಇವೆಲ್ಲವೂ ಯೋಗ್ಯತೆಯ ಲಕ್ಷಣಗಳು. ಇವುಗಳೊಂದಿಗೆ ನಾವು ಮುಂದುವರಿದರೆ, ಯೋಗವೂ ಒಂದು ದಿನ ನಮ್ಮ ಬಾಗಿಲಿಗೆ ಬರುತ್ತದೆ.

ಕೊನೆಗೆ, ಪ್ರತಿಯೊಬ್ಬರೂ ತಮ್ಮ ಜೀವನದ ರಾಜಕುಮಾರರೇ. ಅವಕಾಶ ಬಂದಾಗ ಅದನ್ನು ಸಾಧನೆಯಾಗಿ ರೂಪಿಸುವ ಶಕ್ತಿ ನಮ್ಮಲ್ಲಿರಬೇಕು.

"ಯೋಗ ಸಮಯದ ಉಡುಗೊರೆ... ಯೋಗ್ಯತೆ ಜೀವನದ ಬಲ - ಎರಡೂ ಸೇರಿದಾಗಲೇ ಬದುಕು ನಿಜವಾದ "ಒಂದು ಮುತ್ತಿನ ಕಥೆ" ಆಗುತ್ತದೆ.

**ಸಂಕಲನ : ರೊ. ರಾಜೇಶ್ ಡಿ. ಶೆಣೈ**

## ಮಾರ್ಚ್ 17ರ ಜಂಟಿ ಸಭೆಯ ಛಾಯಾಚಿತ್ರಗಳು


















## ಕಾರ್ಯದರ್ಶಿಯವರ ವರದಿ



ರೋಟರಿ ಐಸಿರಿಯ 35ನೇ ವಾರದ ಸಭೆ 17/3/2026 ರಂದು ರೋಟರಿ ಕ್ಲಬ್ ಮಣಿಪಾಲ ಹಾಗೂ ರೋಟರಿ ಕ್ಲಬ್ ಕಟಪಾಡಿ ಇವರ ಜಂಟಿ ಆಶ್ರಯದಲ್ಲಿ ಮಣಿಪಾಲದ ರೋಟರಿ ಹಾಲ್ ನಲ್ಲಿ ನಡೆಯಿತು.

ವೇದಿಕೆಯಲ್ಲಿದ್ದ ಅಧ್ಯಕ್ಷರಿಗೆ ಕೊರಳ ಲಾಂಛನ ತೊಡಿಸಿ ಸಭೆಯನ್ನು ಆರಂಭಿಸಲಾಯಿತು. RC ಮಣಿಪಾಲದ ಅಧ್ಯಕ್ಷರಾದ ರೊ. ಶಶಿಕಲಾ ರಾಜವರ್ಮ ಅವರು ಎಲ್ಲರನ್ನೂ ಸ್ವಾಗತಿಸಿದರು.

ರೋಟರಿ ಐಸಿರಿಯ ನಿಕಟಪೂರ್ವ ಅಧ್ಯಕ್ಷರಾದ ರೊ. ಸುನಿಲ್ ಕುಮಾರ್ ಅವರು ಪ್ರಸ್ತುತ ಜಗತ್ತಿನಲ್ಲಿ ದೇಶ ಮುಂದುವರೆಯಲು ಮಾಹಿತಿ ಕ್ರೋಢೀಕರಣ ಮುಖ್ಯ ಎಂದು ಮಾಹಿತಿ ನೀಡಿದರು.

ರೋಟರಿ ಐಸಿರಿಯ ಸದಸ್ಯರಾದ ವಲಯ ಸೇನಾನಿ ರೊ. ಸ್ಮಿತಾ ಜಿ ಕಾಮತ್ ಅವರು ಪ್ರಸ್ತಾವನೆಯ ಮಾತುಗಳನ್ನಾಡಿ ರೋಟರಿ ಸದಸ್ಯರಾಗಿರುವ ಪ್ರಾಮುಖ್ಯತೆ ಹಾಗೂ joint meeting ಗಳಲ್ಲಿ ಬೆಳೆವ ಒಡನಾಟದ ಬಗ್ಗೆ ಮಾತನಾಡಿದರು.

ಮುಖ್ಯ ಅತಿಥಿ Dr ನಾರಾಯಣ ಶೆಣೈ ಅವರ ಪರಿಚಯವನ್ನು ರೊ. ನಹುಷ ಅವರು ಸಭೆಗೆ ನೀಡಿದರು. ರೊ. ರಾಜೇಶ್ ಡಿ ಶೆಣೈ ಅವರು ರೋಟರಿ ಐಸಿರಿಯ ಐಶ್ವರ್ಯ ಸಂಚಿಕೆಯ ವಿಶೇಷತೆಯನ್ನು ಸಭೆಗೆ ತಿಳಿಸಿದರು. ಮುಖ್ಯ ಅತಿಥಿ Dr ನಾರಾಯಣ ಶೆಣೈ ಅವರು 37ನೇ ವಾರದ ಸಂಚಿಕೆ ಐಶ್ವರ್ಯ ವನ್ನು ಬಿಡುಗಡೆಗೊಳಿಸಿದರು. ರೊ ರಾಜೇಶ್ ಡಿ ಶೆಣೈ ಅವರು ಸಹಕರಿಸಿದರು.

Dr ನಾರಾಯಣ ಶೆಣೈ ಅವರು ನೀರಿನ ಸಂರಕ್ಷಣೆ ಹಾಗೂ 5 ಸ್ಟಾರ್ ಹಸಿರು ಮನೆಯ ಬಗ್ಗೆ ಸುಧೀರ್ಘ ಮಾಹಿತಿ ನೀಡಿದರು. ರೊ. ಎ. ಗಣೇಶ್ ಅವರು ಜಲ ಮರು ಬಳಕೆ ಹಾಗೂ ಮಿತ ಬಳಕೆ ಬಗ್ಗೆ ಮಾಹಿತಿ ನೀಡಿದರು.

ಸಹಾಯಕ ಗವರ್ನರ್ ರೊ. ಅಮಿತ್ ಅರವಿಂದ್ ಅವರು ಮೂರು ಕ್ಲಬ್ ಗಳು ಜೊತೆಗೂಡಿ ಕಾರ್ಯಕ್ರಮ ನಡೆಸಿದ್ದನ್ನು ಪ್ರಶಂಸಿಸಿದರು. Dr ನಾರಾಯಣ ಶೆಣೈ ಅವರ ವೃತ್ತಿಸೇವೆಯನ್ನು ಗುರುತಿಸಿ ಮೂರು ಕ್ಲಬ್ ಗಳು ಜೊತೆಗೂಡಿ ಅವರನ್ನು ಗೌರವಿಸಿದರು.

ಮೂರು ಕ್ಲಬ್ ಗಳಲ್ಲಿ ಹುಟ್ಟುಹಬ್ಬ ಹಾಗೂ ವೈವಾಹಿಕ ವಾರ್ಷಿಕೋತ್ಸವವನ್ನು ಆಚರಿಸಿಕೊಳ್ಳುತ್ತಿರುವ ಸದಸ್ಯರನ್ನು ಗುರುತಿಸಲಾಯಿತು. ಅಧ್ಯಕ್ಷರು ಅತಿಥಿಗಳಿಗೆ ಗೌರವ ಸ್ಮರಣಿಕೆ ನೀಡಿದರು. ವಲಯ ಸೇನಾನಿಯವರು ಮೂರು ಅಧ್ಯಕ್ಷರನ್ನು ಪುಸ್ತಕ ನೀಡಿ ಗೌರವಿಸಿದರು.

ರೋಟರಿ ಕ್ಲಬ್ ಕಟಪಾಡಿ ಇದರ ಅಧ್ಯಕ್ಷರಾದ ರೊ ಆಶಾ ಅಂಚನ್ ಇವರು ವಂದನಾರ್ಪಣೆ ಮಾಡಿದರು.

ರಾಷ್ಟ್ರಗೀತೆಯನ್ನು ಹಾಡಲಾಯಿತು. ಉಪಸ್ಥಿತರಿದ್ದ ಮೂರು ಕ್ಲಬ್ ನ ಎಲ್ಲ ಸದಸ್ಯರು ಭಾವಚಿತ್ರದಲ್ಲಿ ಒಂದುಗೂಡಿದರು. ದಂಡಪಾಣಿ ಕೊರಳಲಾಂಛನ ತೆಗೆದು ಅಧ್ಯಕ್ಷರು ಸಭೆಯನ್ನು ಮುಂದೂಡಿದರು.

## "ಐಶ್ವರ್ಯ" 37ನೇ ಸಂಚಿಕೆ ಬಿಡುಗಡೆ



ರೊ. ರಾಜೇಶ್ ಡಿ. ಶೆಣೈ ಸಂಪಾದಕತ್ವದ ರೋಟರಿ ಐಸಿರಿಯ ಸಾಪ್ತಾಹಿಕ ಸಂಚಿಕೆ "ಐಶ್ವರ್ಯ"ದ ಮೂವತ್ತೇಳನೇ ಸಂಚಿಕೆಯನ್ನು, ಡಾ. ನಾರಾಯಣ ಶೆಣೈ ಅವರು 17/03/26ರಂದು ಮಣಿಪಾಲದ ರೋಟರಿ ಹಾಲ್ ನಲ್ಲಿ ಬಿಡುಗಡೆಗೊಳಿಸಿದರು.

---

ಮಾರ್ಚ್ 17ನೇ ತಾರೀಕಿನಂದು ನಡೆದ ಜಂಟಿ ಸಭೆಯಂದೇ ವೈವಾಹಿಕ ವಾರ್ಷಿಕೋತ್ಸವವನ್ನು ಆಚರಿಸುತ್ತಿರುವ ರೊ. MPHF ಮಂಜುನಾಥ ಉಪಾಧ್ಯ ಎಂ ಮತ್ತು ರೊ. PHF. ಗೀತಾಶ್ರೀ ಎಂ. ಉಪಾಧ್ಯ ದಂಪತಿಯವರನ್ನು ಮತ್ತು ಮಾರ್ಚ್ 18ರಂದು ಹುಟ್ಟುಹಬ್ಬ ಇರುವ ರೊ. ಬಿ. ರಾಮಕೃಷ್ಣ ಪೂಂಜಾ ಅವರನ್ನು ವೇದಿಕೆಗೆ ಕರೆದು ಗೌರವಿಸಲಾಯಿತು.



